

ಇನ್ನು ಏಳು ದಿನಗಳಲ್ಲಿ ಸಮುದ್ರವು ಉಕ್ಕೇರಿ ದ್ವಾರಕೆಯು ಮುಳುಗುವುದೆಂದು ಶ್ರೀಕೃಷ್ಣನಿಗೆ ಖಚಿತವಾಯಿತು. ತಕ್ಷಣವೇ ಹಿರಿಯರನ್ನೆಲ್ಲ ಕರೆಸಿದ ಶ್ರೀಕೃಷ್ಣ, ತಾನು ಗ್ರಹಿಸಿದ ವಿಷಯವನ್ನು ಹೇಳಿದನು. "ನಾವೆಲ್ಲರೂ ಇಲ್ಲಿಂದ ಪುಣ್ಯಕ್ಷೇತ್ರವಾದ ಪ್ರಭಾಸಕ್ಕೆ ತೆರಳೋಣ. ಅಲ್ಲಿ ಧರ್ಮದಿಂದ ನಡೆಯುತ್ತಾ ಜೀವನ ಸಾಗಿಸೋಣ" ಎಂದನು. ಎಲ್ಲರೂ ಕೃಷ್ಣನ ಮಾತಿಗೆ ಸಹಮತ ವ್ಯಕ್ತಪಡಿಸಿದರು.

ಕೃಷ್ಣನು ಮನಸ್ಸಿನ ನೆಮ್ಮದಿಗಾಗಿ ಏಕಾಂತಸ್ಥಳಕ್ಕೆ ಬಂದನು. ಆತನೊಂದಿಗೆ ಉದ್ಧವನೂ ಬಂದನು. ಅವನು ದುಗುಡ ಮನಸ್ಸಿನಿಂದಿದ್ದನು. "ಕೃಷ್ಣ, ಇನ್ನು ಕೆಲವೇ ದಿನಗಳಲ್ಲಿ ಯಾದವರ ನಾಶವಾಗುವುದು. ನನ್ನನ್ನು ನಿನ್ನ ಜೊತೆ ಕರೆದುಕೊಂಡು ಹೋಗು" ಎಂದು ಉದ್ಧವನು ಅವನಲ್ಲಿ ದೀನನಾಗಿ ಕೋರಿಕೊಂಡನು. "ಉದ್ಧವ, ನಿನ್ನ ತಿಳುವಳಿಕೆ ಸರಿಯಾಗಿಯೇ ಇದೆ. ಇನ್ನು ಏಳು ದಿನಗಳಲ್ಲಿ ದ್ವಾರಕೆಯು ಸಮುದ್ರದಲ್ಲಿ ಮುಳುಗುತ್ತದೆ. ಯಾದವರು ತಮ್ಮ ದರ್ಪ, ದುರಹಂಕಾರಗಳಿಂದಾಗಿ ತಮ್ಮಲ್ಲೇ ಹೊಡೆದಾಡಿಕೊಂಡು ಸಾಯುತ್ತಾರೆ. ನೀನು ಮತ್ತೆ ಸಂಸಾರ ಬಂಧನದಲ್ಲಿ ಸಿಲುಕಬೇಡ. ಒಂದೆಡೆ ನೆಲೆಸದೆ ನೀನು ತೀರ್ಥಯಾತ್ರೆಗೆ ಹೊರಡು. ಸರ್ವ ಸಂಗಪರಿತ್ಯಾಗಕ್ಕಾಗಿ, ನೀತಿಯುಕ್ತ ಬದುಕಿಗಾಗಿ ಭೂಮಿಯಿಂದ ಕ್ಷಮಾಗುಣವನ್ನು, ವಾಯುವಿನಿಂದ ನಿರ್ಲಿಪ್ತತೆಯನ್ನು, ಆಕಾಶದಿಂದ ನಿರ್ದೋಷತ್ವವನ್ನು, ಜಲದಿಂದ ಪವಿತ್ರತೆಯನ್ನು, ಅಗ್ನಿಯಿಂದ ಶುಚಿತ್ವವನ್ನು, ಚಂದ್ರನಿಂದ ನಿರ್ವಿಕಾರ ಬುದ್ಧಿಯನ್ನು, ಸೂರ್ಯನಿಂದ ಸ್ವಾರ್ಥತ್ಯಾಗವನ್ನು, ಪಾರಿವಾಳದಿಂದ ಅತಿಸ್ನೇಹ ವರ್ಜ್ಯತ್ವವನ್ನು, ಹೆಬ್ಬಾವಿನಿಂದ ಲಭ್ಯವಾದದ್ದರಲ್ಲಿ ತೃಪ್ತಿಪಡುವುದನ್ನು, ಸಮುದ್ರದಿಂದ ಸುಖ-ದುಃಖಗಳನ್ನು ಒಂದೆ ಬಗೆಯಾಗಿ ಕಾಣಬೇಕೆನ್ನುವುದನ್ನು, ಜೇನುನೊಣದಿಂದ ಸಂಚರಿಸುತ್ತಾ ಇರಬೇಕೆಂಬುದನ್ನು, ಆನೆಯಿಂದ ಮೋಸವಾಗಬಾರದೆಂದು, ಜಿಂಕೆಯಿಂದ ಚಂಚಲಚಿತ್ತನಾಗಬಾರದೆಂದು, ಮೀನಿನಿಂದ ನಾಲಗೆ ರುಚಿಗೆ ಮರುಳಾಗಬಾರದೆಂದು, ವೇಶ್ಯೆಯಿಂದ ಹಣದಾಸೆ ಸಲ್ಲದೆಂಬುದನ್ನು, ಪಕ್ಷಿಯಿಂದ ಸಂಗ್ರಹಿಸಬಾರದೆಂಬ ಗುಣವನ್ನು, ಮಗುವಿನಿಂದ ಮಾನಾಪಮಾನದ ಅಭಿಮಾನವನ್ನು ತೊರೆಯಬೇಕೆಂಬುದನ್ನು, ಕನ್ಯೆಯಿಂದ ಏಕಾಕಿಯಾಗಿ ಇರಬೇಕು ಎಂಬುದನ್ನು, ಬಿಲ್ಲುಗಾರನಿಂದ ಏಕಾಗ್ರಚಿತ್ತವನ್ನು, ಹಾವಿನ ಗುಣದಲ್ಲಿ ವಾಸಮಾಡಿಯೂ ಮೌನದಿಂದಿರಬೇಕೆಂಬುದನ್ನು, ಜೇಡರಹುಳದಿಂದ ಪರಮಾತ್ಮ ಸೃಷ್ಟಿಸಿದ ಜಗತ್ತಿನ ಅಂತ್ಯವನ್ನು, ದುಂಬಿಯಿಂದ ಏನನ್ನು ಧ್ಯಾನಿಸುತ್ತೇವೋ ಅದನ್ನೇ ದೊರಕಿಸಿಕೊಳ್ಳುತ್ತೇವೆ ಎಂಬುದನ್ನು ತಿಳಿದು ನಾವು ಜೀವನವನ್ನು ಸಾಗಿಸಬೇಕಾಗಿದೆ. ಇದೇ ಪ್ರಕೃತಿಯಲ್ಲಿನ ಗುರುಗಳಾಗಿವೆ. ಕರ್ಮಯೋಗ ಮತ್ತು ಜ್ಞಾನಯೋಗಕ್ಕೆ ಭಕ್ತಿಯೋಗವೇ ತಳಹದಿಯಾಗಿದೆ" ಎಂದನು. ಉದ್ಧವನ ಕೋರಿಕೆಯಂತೆ ಆತನಿಗೆ ಭಾಗವತವನ್ನು ಉಪದೇಶಿಸಿದನು. "ಈ ಭಾಗವತವೇ ಭೂಲೋಕದಲ್ಲಿನ ಸಾತ್ವಿಕ ಜೀವರಾಶಿಗಳಿಗೆ ಮುಕ್ತಿಮಾರ್ಗವನ್ನು ಹೊಂದಲು ಪ್ರೇರಣೆಯಾಗಿದೆ. ಭಾಗವತವು ಕಲಿಯುಗದಲ್ಲಿ ನನ್ನ ಪ್ರತಿನಿಧಿ ಎನಿಸಿದೆ. ಯಾರು ಭಾಗವತವನ್ನು ಭಯಭಕ್ತಿಗಳಿಂದ ಪಠಿಸಿ ಆಚರಿಸುತ್ತಾರೋ ಅವರು ನನ್ನ ಸಾಮೀಪ್ಯವನ್ನು ಹೊಂದುತ್ತಾರೆ. ಇದರಲ್ಲಿ ಯಾವುದೇ ಸಂಶಯವಿಲ್ಲ. ಉದ್ಧವ, ನೀನು ಈಗ ತೀರ್ಥಯಾತ್ರೆಗೆ ಹೊರಡು. ಅಲ್ಲಿ ನರನಾರಾಯಣರ ಆಶ್ರಮವನ್ನು ಸೇರಿಕೊಂಡು ತಪಸ್ಸು ಮಾಡಿ ಭಗವಂತನ ಪಾದವನ್ನು ಸೇರು" ಎಂದು ತಿಳಿಸಿದನು.

ಶ್ರೀಕೃಷ್ಣನ ಊಹೆಯಂತೆಯೇ ಪ್ರಭಾಸಕ್ಷೇತ್ರಕ್ಕೆ ಬಂದ ಯಾದವರು ಮದ್ಯ ಕುಡಿದು ಸ್ಮೃತಿ ತಪ್ಪಿದರು. ಕಾಡುಹರಟೆಯೇ ಕಲಹವಾಗಿ ಪರಿಣಮಿಸಿತು. ಒನಕೆಯ ಪುಡಿಗಳಿಂದ ಹುಟ್ಟಿದ ಹುಲ್ಲನ್ನೇ ಕಿತ್ತು, ಚಾವಟಿ ಮಾಡಿಕೊಂಡು ಒಬ್ಬರಿಗೊಬ್ಬರು ಹೊಡೆದಾಡಿಕೊಂಡು ಅಸುನೀಗಿದರು. ಬಲರಾಮನು ದಂಡೆಯ ಮೇಲೆ ಕುಳಿತು ದೇಹತ್ಯಾಗ ಮಾಡಿದನು. ಶ್ರೀಕೃಷ್ಣನು ಮರದಡಿಯಲ್ಲಿ ಧ್ಯಾನ ಮಾಡುತ್ತಿರುವಾಗ ಮೀನುಗಾರನೊಬ್ಬನು ದೂರದಿಂದ ನೋಡಿ, ಒನಕೆಯ ತುಂಡಿದ್ದ ಬಾಣದಿಂದ ಶ್ರೀಕೃಷ್ಣನ ಪಾದಕ್ಕೆ ಗುರಿಯಿಟ್ಟು ಹೊಡೆದನು. ಕೃಷ್ಣನು ಅಲ್ಲಿಯೇ ದೇಹತ್ಯಾಗ ಮಾಡಿದನು. ಇದೆಲ್ಲವನ್ನೂ ನೋಡುತ್ತಾ ನಿಂತಿದ್ದ ಅರ್ಜುನನು ಬಹಳ ದುಃಖಪಟ್ಟನು. ಅವನು ಅಸುನೀಗಿದ ಎಲ್ಲ ಯಾದವರ ಅಂತ್ಯಕ್ರಿಯೆ ಮುಗಿಸಿ, ಅಳಿದುಳಿದ ಯಾದವರನ್ನು ಮತ್ತು ಯಾದವಸ್ತ್ರೀಯರನ್ನು ಹಸ್ತಿನಾವತಿಗೆ ಕರೆದುಕೊಂಡು ಬಂದನು. ಧರ್ಮರಾಯನು ಅರ್ಜುನನಿಂದ ನಡೆದ ವಿಷಯವನ್ನೆಲ್ಲಾ ತಿಳಿದು, ವೈರಾಗ್ಯ ತಾಳಿ ಅಭಿಮನ್ಯುವಿನ ಮಗನಾದ ಪರೀಕ್ಷಿತನಿಗೆ ರಾಜ್ಯಭಾರ ವಹಿಸಿ, ಸಹೋದರರು ಮತ್ತು ಪತ್ನಿಯೊಂದಿಗೆ ಸ್ವರ್ಗಾರೋಹಣ ಮಾಡಲು ಅರಮನೆಯನ್ನು ತ್ಯಜಿಸಿದನು. ದಾರಿಯಲ್ಲಿ ಎಲ್ಲರೂ ದೇಹತ್ಯಾಗ ಮಾಡಿ ಸ್ವರ್ಗ ಸೇರಿದರು. ಧರ್ಮರಾಯನು ಮಾತ್ರ ದೇಹಸಮೇತನಾಗಿ ಸ್ವರ್ಗ ಸೇರಿದನು.



# ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು

**ಡಾ. ಕೆ. ಅನಂತರಾಮು**

## ವಿದ್ಯಾಸಾಗರರು ಕಲಿತ ಸಂಸ್ಕೃತಿಯ ಪಾಠ



ಸ್ವಾಮಿ ವಿವೇಕಾನಂದರು ಮೆಚ್ಚಿಕೊಂಡಿದ್ದ ಮಹಾಪುರುಷರಲ್ಲಿ ಈಶ್ವರಚಂದ್ರ ವಿದ್ಯಾಸಾಗರರೂ ಒಬ್ಬರು. ಅವರಿಂದ ವಿವೇಕಾನಂದರು ಸಾಕಷ್ಟು ಪ್ರಭಾವಿತರಾಗಿದ್ದರು. ಅವರು ಶ್ರೀರಾಮಕೃಷ್ಣ ಪರಮಹಂಸರ ಜನ್ಮಭೂಮಿ ಕಾಮಾರಪುಕುರಕ್ಕೆ ಸಮೀಪದ ವೀರಸಿಂಗ್ ಎಂಬ ಗ್ರಾಮದಲ್ಲಿ ಹುಟ್ಟಿದವರು. "ವಿದ್ಯಾಸಾಗರರೆಂದರೆ ಬಹುಪತ್ನಿ ಪದ್ಧತಿಯನ್ನು ನಿಲ್ಲಿಸಿದ, ವಿಧವಾವಿವಾಹವನ್ನು ಸಾಧ್ಯವಾಗಿಸಿದ ಮಹನೀಯರು. ಉತ್ತರ ಹಿಂದೂಸ್ತಾನದ ನನ್ನ ವಯಸ್ಸಿನ ಯಾರೊಬ್ಬರ ಮೇಲೂ ಅವರ ನೆರಳು ಬೀಳದೆ ಇರಲಾರದು" ಎಂದು ವಿವೇಕಾನಂದರೇ ಹೇಳಿದ್ದಾರೆ. "ಹೆಸರಿಗೆ ತಕ್ಕಂತೆ ಈಶ್ವರಚಂದ್ರರು ವಿದ್ಯಾಸಾಗರವೇ ಆಗಿದ್ದರು. ಅವರೊಬ್ಬ ಶಿಕ್ಷಣತಜ್ಞರೂ, ಬರಹಗಾರರೂ, ಸಮಾಜಸೇವಕರೂ, ಪರೋಪಕಾರಿಗಳೂ, ಸ್ವಾತಂತ್ರ್ಯಪ್ರೇಮಿಗಳೂ, ಮಾತೃಭಕ್ತರೂ, ಸರಳತೆಯ ಸಾಕಾರ ಮೂರ್ತಿಯೂ ಆಗಿದ್ದರು. ಅವರು ತಮ್ಮ ಆದಾಯದ ಬಹುಭಾಗವನ್ನು ವಿಧವೆಯರ, ದಿಕ್ಕಿಲ್ಲದವರ, ದರಿದ್ರರ, ಅನಾಥರ ಕಣ್ಣೀರು ಒರೆಸಲೆಂದೇ ವಿನಿಯೋಗಿಸುತ್ತಿದ್ದರು. ಅವರ ಸಹಾನುಭೂತಿ ಮಾನವಕುಲಕ್ಕಷ್ಟೇ ಸೀಮಿತವಾಗಿರಲಿಲ್ಲ. ಕರುಗಳಿಗೆ ಹಾಲು ದೊರೆಯಲಿ ಎಂದು ಅನೇಕ ವರ್ಷಗಳ ಕಾಲ ಅವರು ಹಾಲನ್ನೇ ಕುಡಿಯಲಿಲ್ಲ. ಕುದುರೆಗಳಿಗೆ ಕಷ್ಟಕೊಡಬೇಕಾಗುತ್ತದೆಯೆಂದು ಗಾಡಿಯನ್ನೇ ಹತ್ತುತ್ತಿರಲಿಲ್ಲ" ಎಂದು ಮುಂತಾಗಿ ಮಾಸ್ಟರ್ ಮಹಾಶಯರು ವಿದ್ಯಾಸಾಗರರ ಗುಣಾವಳಿಗಳನ್ನು ಎತ್ತಿಹಿಡಿದಿದ್ದಾರೆ. ಭಾರತೀಯ ಸಂಸ್ಕೃತಿಯ ಸಂರಕ್ಷಕರಲ್ಲಿ ಒಬ್ಬರಾಗಿದ್ದ ಅವರು, ಸಂಸ್ಕೃತಿಯ ಪಾಠವೊಂದನ್ನು ಅನಿರೀಕ್ಷಿತವಾಗಿ ಕಲಿತ ಸನ್ನಿವೇಶದ ಕಥೆಯೊಂದನ್ನು ಸ್ವಾಮಿ ವಿವೇಕಾನಂದರು ಸ್ವಾರಸ್ಯಮಯವಾಗಿ ಬಿತ್ತರಿಸಿದ್ದಾರೆ.

ಈಶ್ವರಚಂದ್ರ ವಿದ್ಯಾಸಾಗರರು ಒಂದುದಿನ ಶಾಸನಸಭೆಯ ಕಾರ್ಯಕಲಾಪಗಳನ್ನು ಮುಗಿಸಿಕೊಂಡು ಕಾಲ್ನಡಿಗೆಯಲ್ಲಿಯೇ ಮನೆಯತ್ತ ಬರುತ್ತಿದ್ದರು. ಆಂಗ್ಲರ ರಾಜ್ಯಭಾರದ ಕಾಲವಾಗಿದ್ದರಿಂದ, ಅವರು ಶಾಸನಸಭೆಗೆಂದು ಆಂಗ್ಲಪೋಷಾಕನ್ನು ಧರಿಸಿಕೊಂಡು ಹೋಗಿದ್ದರು. ಮಿಕ್ಕ ಸಮಯದಲ್ಲೆಲ್ಲ ಅವರು ಹಿಂದೂ ವೇಷಭೂಷಣದಲ್ಲಿಯೇ ಇರುತ್ತಿದ್ದರು. ದಾರಿ ನಡೆಯುವಾಗ ಅವರು, 'ಶಾಸನಸಭೆಗೆ ಹೋಗುವಾಗ ನನ್ನ ಸಹಜವಾದ ವೇಷದಿಂದ ನಾನು ಹೋದರಾಗದೆ? ಈ ಆಂಗ್ಲ ಪೋಷಾಕೇ ನನಗೆ ಬೇಕೆ?' ಎಂದು ಆಲೋಚಿಸುತ್ತಾ, ನಿಧಾನವಾಗಿ ಹೆಜ್ಜೆಗಳನ್ನಿಡುತ್ತ ಬರುತ್ತಿದ್ದರು. ಅದೇ ದಾರಿಯಲ್ಲಿ ವಿದ್ಯಾಸಾಗರರಿಗಿಂತ ಸ್ವಲ್ಪ ಮುಂದೆ, ಒಬ್ಬ ಸ್ಥೂಲಕಾಯದ ಮೊಘಲ್‌ಪುರುಷನು, ತನ್ನ ಸಂಸ್ಕೃತಿಗೆ ಒಪ್ಪುವ ಉಡುಪುಗಳನ್ನು ಧರಿಸಿಕೊಂಡು, ನಿಧಾನವಾಗಿ ಹೆಜ್ಜೆಯಿಡುತ್ತ ತನ್ನ ಮನೆಯತ್ತ ನಡೆದು ಹೋಗುತ್ತಿದ್ದನು.

ಆಗ ಇದ್ದಕ್ಕಿದ್ದಂತೆ ಮೊಘಲನಿಗೆ ಪರಿಚಿತನಾದ ಯಾರೋ ಒಬ್ಬ ವ್ಯಕ್ತಿಯು ಓಡೋಡಿ ಬಂದು, ಆ ಮೊಘಲನನ್ನು ಕುರಿತು, "ಸ್ವಾಮಿ, ನಿಮ್ಮ ಮನೆಗೆ ಬೆಂಕಿ ಬಿದ್ದಿದೆ, ಹೊತ್ತಿ ಉರಿಯುತ್ತಿದೆ. ನೀವು ಬೇಗನೆ ಬರಬೇಕು" ಎಂದು ಏದುಸಿರು ಬಿಡುತ್ತ ಸುದ್ದಿಮುಟ್ಟಿಸಿದನು. ಅದನ್ನು ಕೇಳಿದ ಮೊಘಲನಾದರೋ, "ಓಹೋ, ಬೆಂಕಿಬಿದ್ದಿತೇನು, ಸರಿಯೆ" ಎನ್ನುತ್ತ, ತನ್ನ ಎಂದಿನ ಶೈಲಿಯಲ್ಲಿಯೇ ಸಾವಕಾಶವಾಗಿ ಹೆಜ್ಜೆಗಳನ್ನಿಡುತ್ತ ಸಾಗಿದನು. ವಿದ್ಯಾಸಾಗರರು ಆ ವಿದ್ಯಮಾನವನ್ನೆಲ್ಲ ಕುತೂಹಲದಿಂದ ನೋಡುತ್ತಿದ್ದರು. ಸುದ್ದಿಮುಟ್ಟಿಸಿದ ಪುರುಷನು ಮೊಘಲನ ವರ್ತನೆಯನ್ನು ಕಂಡು ಆಶ್ಚರ್ಯಚಕಿತನಾಗಿ, "ಇದೇನಿದು ಸ್ವಾಮಿ, ಮನೆ ಹತ್ತಿ ಉರಿಯುತ್ತಿದ್ದರೂ ಹೀಗೆ ನಿಧಾನವಾಗಿಯೇ ಹೆಜ್ಜೆಯಿಡುತ್ತಿದ್ದೀರಲ್ಲ, ಸ್ವಲ್ಪ ಚುರುಕು ಮಾಡಬಾರದೆ?" ಎಂದು ಆಕ್ಷೇಪಿಸುವ ಧ್ವನಿಯಲ್ಲಿ ಹೇಳಿದನು. ಆಗ ಆ ಮೊಘಲನು ಕೋಪಗೊಂಡು ಸುದ್ದಿವಾಹಕನತ್ತ ತಿರುಗಿ, "ಅಯ್ಯಾ ಮೂರ್ಖ, ಮನೆ ಉರಿದು ಹೋಗುತ್ತಿದೆಯೆಂದರೆ ಒಂದಿಷ್ಟು ಕಂಬಗಳು, ಬೊಂಬುಗಳು, ಗಳುಗಳು, ಹಲಗೆಗಳು ನಾಶವಾಗುತ್ತಿವೆ ತಾನೆ! ಅಷ್ಟುಮಾತ್ರದಿಂದ ನಾನು ನನ್ನ ತಲೆತಲಾಂತರದಿಂದ ಬಂದ ನಡಗೆಯ ಶೈಲಿಯನ್ನೇ ಬದಲಾಯಿಸಿಬಿಡಬೇಕೆ? ಆಗದಾಗದು" ಎಂದು ಹೇಳಿ ನಿಧಾನವಾಗಿಯೇ ಮುನ್ನಡೆದನು. ಈಶ್ವರಚಂದ್ರರಿಗೆ ಆ ಮೊಘಲನ ಮಾತಿನ ಅಂತರಾಳದಲ್ಲಿದ್ದ